**ಭಾರತದ ಅಕ್ರಮ ವಿಭಜನೆ?**

ಇದೇನಿದು ಭಾರತದ ನಕ್ಷೆ ಬದಲಾದಂತಿದೆಲ್ಲಾ? ಎಂದು ನೀವು ಯೋಚಿಸುತ್ತಿರಬಹುದು. ನಿಮ್ಮ ಯೋಚನೆ ಸರಿಯಾಗಿಯೇ ಇದೆ. ಏಕೆಂದರೆ ಭಾರತ ದೇಶದ ಮುಕುಟಪ್ರಾಯವಾದ (ಮುಕುಟಮಣಿ) ಕಾಶ್ಮೀರದ ಒಂದು ಭಾಗ ಈ ಚಿತ್ರದಲ್ಲಿ ಮಾಯವಾಗಿದೆ. ಇದೇನೂ ಭಾರತ ದೇಶದ ಬಗ್ಗೆ ಅರಿವಿಲ್ಲದ ಯಾರೋ ಹೊರದೇಶದವರು ಮುದ್ರಿಸಿರುವ ನಕ್ಷೆಯಲ್ಲ. ಭಾರತದ ಪ್ರತಿಷ್ಠಿತ ಸಾರ್ವಜನಿಕ ವಲಯದ ಭಾರತ್ ಎಲೆಕ್ಟ್ರಾನಿಕ್ಸ್ ಸಂಸ್ಥೆಯ, ಎಂ.ಎ. ವಿಭಾಗದವರು ೨೬-೦೧-೯೪ ರಂದು ಗಣರಾಜ್ಯದಿವಸದ ಪ್ರಯುಕ್ತ ಕಾರ್ಮಿಕರಿಗೆ ಶುಭಕೋರಿರುವ ರೀತಿ ಇದು.

'ಲೆಟ್ ಅಸ್ ಸೆಲಬ್ರೇಟ್ ರಿಪಬ್ಲಿಕ್ ಡೇ ವಿತ್ ಯೂನಿಟಿ' (ನಾವೆಲ್ಲರೂ ಗಣರಾಜ್ಯ ದಿವಸವನ್ನು ಒಟ್ಟಾಗಿ ಆಚರಿಸೋಣ) ಎಂಬ ಹೇಳಿಕೆಯನ್ನು ಈ ಪತ್ರ ಒಳಗೊಂಡಿದೆ. ಆದರೆ ಭಾರತ ದೇಶದ ಒಂದು ಭಾಗವನ್ನೇ ಕತ್ತರಿಸಿ, ಏಕತೆಯನ್ನು ಸಾರುತ್ತಿರುವುದು, ಎಂತಹ ವಿಪರ್ಯಾಸ ಅಲ್ಲವೇ? ಕಾಶ್ಮೀರವು ಗಲಭೆ ಪೀಡಿತ ಪ್ರದೇಶವಾಗಿರಬಹುದು. ಅಲ್ಲಿ ಪಾಕಿಸ್ಥಾನೀಯರು ಉಗ್ರಗಾಮಿಗಳನ್ನು ಪೋಷಿಸಿ ಬೆಳೆಸಿ ಅವರನ್ನು ಭಾರತ ಅನಗತ್ಯ ಎಂಬ ಪ್ರಸ್ತಾಪ ಎತ್ತಿರಬಹುದು. ಆದರೆ ಇವೆಲ್ಲಾ ಭಾರತವನ್ನು ಅಸ್ಥಿರಗೊಳಿಸಲು ವಿದೇಶೀಯರು ನಡೆಸುತ್ತಿರುವ ಪಿತೂರಿ. ಭಾರತೀಯರು ಈ ಪಿತೂರಿಗೆ ಬಲಿಯಾಗದೇ ಭಾರತದ ಅಂಗವಾದ ಕಾಶ್ಮೀರವನ್ನು ಉಳಿಸಿಕೊಳ್ಳಬೇಕಾಗಿದೆ.

ಪಕ್ಷದ ವಿಳಂಬ ನೀತಿಯಿಂದಾಗಿ ಕಾಶ್ಮೀರ ಭಾರತ ಸರ್ಕಾರದ ಪೂರ್ಣ ಸ್ವಾಧೀನದಲ್ಲಿಲ್ಲದಿರುವುದು ನಿಜಸ್ಥಿತಿ. ಕಾಶ್ಮೀರದ ಒಂದು ಭಾಗವನ್ನು ಪಾಕಿಸ್ತಾನೀಯರು 'ಪಾಕ್ ಆಕ್ರಮಿತ ಕಾಶ್ಮೀರ' ಎಂದು ಘೋಷಿಸಿಕೊಂಡಿರುವುದೂ ನಿಜ. ಆದರೆ ಕಾಶ್ಮೀರವು ಭಾರತದ ಅವಿಭಾಜ್ಯ ಅಂಗವೇ ಆಗಿದೆ. ಇದನ್ನು ನಕ್ಷೆಯಲ್ಲೂ ತೋರಿಸಬಾರದೇಕೆ? ಬಿ.ಇ.ಸಂಸ್ಥೆ ಇದರ ಬಗ್ಗೆ ಸೂಕ್ತ ಹೇಳಿಕೆ ನೀಡಬೇಕಿದೆ.

Feb 5th 1994 Hosa Diganta Bharathada Akram vibhajane.